## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ.<br>(ನಾಮನಿರ್ದೇಶನ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 24(246) |
| ಉತ್ತರಿಸುವ ದಿನಾಂಕ | : | 09.12.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಇತರೆ ಸಾಮಾನ್ಯ ಆಪೇಕ್ಷಿತರಿಗೆ ನಿವೇಶನಗಳ ಹಂಚಿಕೆಗಳಿಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಈ ಯೋಜನೆ ಯಾವ ಹಂತದಲ್ಲಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರಲ್ಲಿನ ಅವಕಾಶಗಳಂತೆ ಪ್ರಾಧಿಕಾರದಿಂದ ರಚಿಸಲಾಗುವ ಬಡಾವಣೆಗಳಲ್ಲಿನ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991 ರಲ್ಲಿನ ಅವಕಾಶಗಳಂತೆ ಸಾರ್ವಜನಿಕರಿಗೆ ಹಂಚಿಕೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.<br><br>• ನಿಯಮ 3 ರನ್ವಯ ಪ್ರಾಧಿಕಾರವು ಅಭಿವೃದ್ಧಿಪಡಿಸುವ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳ ವಿವರಗಳೊಂದಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಇತರೆ ಮಾಹಿತಿಗಳನ್ನು ಒಳಗೊಂಡಂತೆ ನಗರದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.<br><br>• ನಿಯಮ 12 ರಂತೆ ನಿವೇಶನ ಪಡೆಯಲು ಇಚ್ಛಿಸುವ ಅರ್ಜಿದಾರರು ಕರ್ನಾಟಕದಲ್ಲಿ ಕನಿಷ್ಠ 5 ವರ್ಷಗಳ ಕಾಲ (ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಿಕಟ ಪೂರ್ವದಲ್ಲಿ) ವಾಸವಿರಬೇಕಿರುತ್ತದೆ ಹಾಗೂ ಅರ್ಜಿದಾರರು ಅಥವಾ ಅವರ ಕುಟುಂಬದ ಸದಸ್ಯರು ರಾಜ್ಯದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ಗೃಹ ಮಂಡಳಿಯಿಂದ ಈ ಹಿಂದೆ ನಿವೇಶನ ಅಥವಾ ಮನೆಯನ್ನು ಪಡೆದಿರಬಾರದು.<br><br>• ಆಯಾಯಾ ಪ್ರಾಧಿಕಾರಗಳಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ನಿಯಮ-13 ರಡಿ ನಿಗದಿಪಡಿಸಿರುವ ಆಯ್ಕೆ ನೀತಿಯನ್ನು ಪರಿಶೀಲಿಸಿ, ಅರ್ಹತಾ ಪಟ್ಟಿಯನ್ನು ಸಿದ್ದಪಡಿಸಲಾಗುತ್ತದೆ. |

| | | |
|---|---|---|
| | | • ನಿಯಮ 13 (2) ರಲ್ಲಿ ನಮೂದಿಸಿರುವಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಮಾಜಿ ಸೈನಿಕರು, ಕೇಂದ್ರ/ರಾಜ್ಯ ಸರ್ಕಾರಿ ನೌಕರರು, ಅಂಗವಿಕಲರು ಹಾಗೂ ಸಾರ್ವಜನಿಕ ವರ್ಗ ಸೇರಿದಂತೆ ನಿಯಮಾನುಸಾರ ನಿಗದಿಪಡಿಸಲಾದ ಮೀಸಲಾತಿ ಅನ್ವಯ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ.<br>• ನಿವೇಶನ ಹಂಚಿಕೆಯಾದ ನಂತರ, ಫಲಾನುಭವಿಯು ನಿಯಮ 19(1) ರಂತೆ ನಿಗದಿತ ಮೌಲ್ಯವನ್ನು ಪ್ರಾಧಿಕಾರಕ್ಕೆ ಪಾವತಿಸಬೇಕಾಗುತ್ತದೆ.<br>• ತದನಂತರ, ಪ್ರಾಧಿಕಾರ ಮತ್ತು ಹಂಚಿಕೆದಾರರ ನಡುವೆ ನಿಯಮ 19(1) ರ ಅಡಿಯಲ್ಲಿ 10 ವರ್ಷದ 'ಗುತ್ತಿಗೆ-ಹಾಗೂ-ಮಾರಾಟ (Lease-cum-Sale-Deed) ಒಪ್ಪಂದ'ವನ್ನು ನೋಂದಾಯಿಸಲಾಗುವುದು.<br>• ನಿಯಮ 19(7) ರಡಿ 10 ವರ್ಷದ ಗುತ್ತಿಗೆ ಅವಧಿಯು ಪೂರ್ಣಗೊಂಡ ನಂತರ ಒಪ್ಪಂದದ ಷರತ್ತುಗಳ ಉಲ್ಲಂಘನೆಯಾಗದೇ ಇರುವ ಬಗ್ಗೆ ಖಚಿತಪಡಿಸಿಕೊಂಡು ಅರ್ಜಿದಾರರಿಗೆ ಕ್ರಯಪತ್ರ (Sale Deed) ನೀಡಲಾಗುತ್ತದೆ.<br>**(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.)** |
| **ಆ)** | ಇದರಲ್ಲಿ ಎಸ್.ಎ.ಟಿ. ಎಸ್.ಟಿ.ಪಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991 ರನ್ವಯ ಎಸ್.ಎ.ಟಿ. ಎಸ್.ಟಿ.ಪಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.<br>ಆದರೆ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991 ರಲ್ಲಿ ನಿವೇಶನಗಳ ಹಂಚಿಕೆ ಸಮಯದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಈ ಕೆಳಕಂಡ ವಿವಿಧ ಪ್ರವರ್ಗಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |

| **ಕ್ರ. ಸಂ.** | **ಪ್ರವರ್ಗಗಳು** | **ಪ್ರಮಾಣ ಶೇಕಡಾವಾರು ನಲ್ಲಿ** |
|---|---|---|
| (1) | (2) | (3) |
| (ಎ) | ಇತರೆ ಹಿಂದುಳಿದ ವರ್ಗಗಳು | 02% |
| (ಬಿ) | ಅನುಸೂಚಿತ ಬುಡಕಟ್ಟುಗಳು | 03% |
| (ಸಿ) | ಅನುಸೂಚಿತ ಜಾತಿಗಳು, | 15% |
| (ಡಿ) | ಕೇಂದ್ರ ಸಶಸ್ತ್ರ ಪಡೆಯ ಸೇವಾ ನಿರತ ಸೈನಿಕರು, ಮಾಜಿ ಸೈನಿಕರು, ಮಾಜಿ ಸೈನಿಕರ ಪತ್ನಿ | 05% |

<table>
<tr>
<td></td>
<td></td>
<td>
<table>
<tr><td></td><td>ಮತ್ತು ಸೇವೆಯಲ್ಲಿರುವಾಗ ಮರಣ ಹೊಂದಿರುವ ಯೋಧರ ಅವಲಂಬಿತರು.</td><td></td></tr>
<tr><td>(ಇ)</td><td>ರಾಜ್ಯ ಸರ್ಕಾರ ಸಾರ್ವಜನಿಕ ವಲಯ ಉದ್ದಿಮೆಗಳು/ನಿಯಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು.</td><td>10%</td></tr>
<tr><td>(ಎಫ್)</td><td>ಕೇಂದ್ರ ಸರ್ಕಾರ ಸಾರ್ವಜನಿಕ ವಲಯ ಉದ್ದಿಮೆಗಳು/ನಿಯಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು</td><td>05%</td></tr>
<tr><td>(ಜಿ)</td><td>ಸಾರ್ವಜನಿಕರು (General Public)</td><td>55%</td></tr>
<tr><td>(ಹೆಚ್)</td><td>ಕಲೆ, ವಿಜ್ಞಾನ, ಕ್ರೀಡೆ, ರಾಜ್ಯದ ಪತ್ರಕರ್ತರು ಅಥವಾ ಇನ್ಯಾವುದೇ ಕ್ಷೇತ್ರಗಳಲ್ಲಿ ಶ್ಲಾಘನೀಯ ಸಾಧನೆಯನ್ನು ಸಾಧಿಸಿರುವ ವ್ಯಕ್ತಿಗಳು</td><td>03%</td></tr>
<tr><td>(ಐ)</td><td>ಅಂಗವಿಕಲರು</td><td>02%</td></tr>
<tr><td></td><td>ಒಟ್ಟು</td><td>100%</td></tr>
</table>
ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸಹಿಮ 2022, ದಿನಾಂಕ:28.12.2022 ರಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವರ್ಗಗಳಿಗೆ ನಿವೇಶನಗಳನ್ನು ಕಾಯ್ದಿರಿಸಲು ನಿಯಮ 13(2) ಗೆ ತಿದ್ದುಪಡಿ ತರುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ.
</td>
</tr>
<tr>
<td>ಇ)</td>
<td>ಕಳೆದ 10 ವರ್ಷಗಳಿಂದ ಬಡಾವಣೆ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾದ ರೈತರ ಜಮೀನಿನ ವಿಸ್ತೀರ್ಣ ಎಷ್ಟು; ಆ ಪೈಕಿ ಸ್ವಾಧೀನ ಪಡಿಸಿಕೊಂಡ ಹಾಗೂ ಬಾಕಿ ಇರುವ ಜಮೀನ ವಿಸ್ತೀರ್ಣ ಎಷ್ಟು;</td>
<td>ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು Right to fair compensation and Transparency in land acquisition, rehabilitation and resettlement act, 2013 ರ ಅವಕಾಶದಂತೆ ಅಭಿವೃದ್ಧಿ ಯೋಜನೆಗಳಿಗೆ ಬೇಕಾಗುವ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುವ ಕ್ರಮದೊಂದಿಗೆ, ರೈತರ ಸಹಭಾಗಿತ್ವದೊಂದಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಭೂ ಸ್ವಾಧೀನಪಡಿಸಿಕೊಂಡಿರುವುದಕ್ಕೆ ಪರಿಹಾರಗಳ ಬದಲಿಗೆ ನಿವೇಶನಗಳ ಹಂಚಿಕೆ) ನಿಯಮಗಳು, 2009 ರಲ್ಲಿನ ಅವಕಾಶದಂತೆ ವ್ಯಾಪಕವಾಗಿ ಶೇ. 50:50 ರ ಅನುಪಾತದಡಿಯಲ್ಲಿ ಬಡಾವಣೆ ನಿರ್ಮಿಸಲು ಕ್ರಮವಹಿಸುತ್ತಿರುತ್ತವೆ.<br><br>ಅಭಿವೃದ್ಧಿ ಯೋಜನೆಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳು ಶೇ 50:50 ರ ಅನುಪಾತದಡಿ ಪಡೆದಿರುವ</td>
</tr>
</table>

<table>
<tr>
<td></td>
<td></td>
<td>ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><th>ನಗರಾಭಿವೃದ್ಧಿ ಪ್ರಾಧಿಕಾರಗಳ ಹೆಸರು</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>ಬಳ್ಳಾರಿ</td><td>101.98</td></tr>
<tr><td>ಬೀದರ್</td><td>32.07</td></tr>
<tr><td>ಬೆಳಗಾವಿ</td><td>130.00</td></tr>
<tr><td>ಚಾಮರಾಜನಗರ-ರಾಮಸಮುದ್ರ</td><td>14.60</td></tr>
<tr><td>ಚಿಕ್ಕಮಗಳೂರು</td><td>208.92</td></tr>
<tr><td>ಗದಗ-ಬೆಟಗೇರಿ</td><td>18.47</td></tr>
<tr><td>ಹಾಸನ</td><td>1142.00</td></tr>
<tr><td>ಹೊಸಪೇಟೆ</td><td>24.52</td></tr>
<tr><td>ಕಲಬುರಗಿ</td><td>116.93</td></tr>
<tr><td>ಕೆ.ಜಿ.ಎಫ್</td><td>26.00</td></tr>
<tr><td>ಕೊಪ್ಪಳ</td><td>4.00</td></tr>
</table>
</td>
</tr>
<tr>
<td>ಈ)</td>
<td>ಪ್ರಾಧಿಕಾರದ ಪ್ರತಿ ನಗರಗಳಲ್ಲಿ ಎಸ್.ಟಿ.ಪಿ ನಿರ್ಮಾಣವಾಗದೇ ನದಿ ಮೂಲಗಳು ಕಲುಷಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ?</td>
<td>ನದಿ ಮೂಲಗಳು ಕಲುಷಿತಗೊಳ್ಳದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗಧಿಪಡಿಸಿರುವ ಅಗತ್ಯ ಬಫರ್ ಅನ್ನು ಕಾಯ್ದಿರಿಸಿ, ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br><br>10 ಎಕರೆಗೂ ಮೇಲ್ಪಟ್ಟ ಬಡಾವಣೆಗಳನ್ನು ಅಭಿವೃದ್ಧಿಪಡಿಸುವಾಗ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಎಸ್.ಟಿ.ಪಿ ಯನ್ನು ಕಡ್ಡಾಯವಾಗಿ ಅಳವಡಿಸುವ ನಿಬಂಧನೆಯಿರುತ್ತದೆ. ಅದರಂತೆ 10 ಎಕರೆಗಿಂತ ಮೇಲ್ಪಟ್ಟ ಎಲ್ಲಾ ಬಡಾವಣೆಗಳಲ್ಲಿ ಎಸ್.ಟಿ.ಪಿ ಸ್ಥಳಗಳನ್ನು ಗುರುತಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಮಾರ್ಗಸೂಚಿಗಳನುಸಾರ ಅಭಿವೃದ್ಧಿಪಡಿಸಲಾಗುತ್ತಿದೆ.</td>
</tr>
</table>

**ಸಂಖ್ಯೆ: ನಅಇ 380 ಬೆಮಪ್ರಾ 2025 (ಇ-ಕಡತ)**

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಅನುಬಂಧ-1

## ಜಿಲ್ಲಾವಾರು ಮಾಹಿತಿ

| ನಗರಾಭಿವೃದ್ಧಿ ಪ್ರಾಧಿಕಾರಗಳ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಷರಾ |
|---|---|---|
| ಬಳ್ಳಾರಿ | 101.98 | ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ. |
| ಬೀದರ್ | 32.07 | ಅಭಿವೃದ್ಧಿ ಕಾಮಗಾರಿಗಳು ಚಾಲ್ತಿಯಲ್ಲಿರುತ್ತದೆ. |
| ಬೆಳಗಾವಿ | 130.00 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಚಾಮರಾಜನಗರ-ರಾಮಸಮುದ್ರ | 14.60 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಚಿಕ್ಕಮಗಳೂರು | 208.92 | ಅಭಿವೃದ್ಧಿ ಕಾಮಗಾರಿಗಳು ಚಾಲ್ತಿಯಲ್ಲಿರುತ್ತದೆ. |
| ಗದಗ-ಬೆಟಗೇರಿ | 18.47 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಹಾಸನ | 1142.00 | ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ. |
| ಹೊಸಪೇಟೆ | 24.52 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಕಲಬುರಗಿ | 116.93 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಕೆ.ಜಿ.ಎಫ್ | 26.00 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |
| ಕೊಪ್ಪಳ | 4.00 | ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ
ಆಯುಕ್ತಾಲಯ.